# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ 46, ಜೆ.ಸಿ ನಗರ. ಬೆಂಗಳೂರು.

ದಿನಾಂಕ:09-02-2021

ಸಂಖ್ಯೆ: ಸ.ಅ/ವಾ-46/ಪಿ.ಆರ್/ 09/2020-21

## ವಾರ್ಡ್ ಸಮಿತಿ ಸಭೆಯ ನಡವಳಿಗಳು

ಷಯ: ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಆದೇಶ ಸಂಖ್ಯೆ:ಬಿ12(5)ಪಿ.ಆರ್/35/ 2020-21 ದಿನಾಂಕ: 21-09-2020. ರವರ ಆದೇಶದಂತೆ ದಿನಾಂಕ: 06-02-2021 ರಂದು ವಾರ್ಡ್ ನಂ:46 ಜೆ.ಸಿ.ನಗರದ ಸಿಟಿಜನ್ ಪಾರ್ಕ್‌ನಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

### ::ಸಭೆಗೆ ಹಾಜರಾಗಿದ್ದವರ ವಿವರಗಳು::

| ಕ್ರ.ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ | ಹಾಜರಿ |
|---|---|---|---|
| 1. | ಶ್ರೀ.ಎಸ್.ಜಿ.ರವೀಂದ್ರ. ಭಾ.ಸ.ಸೇ | ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು | ಹಾಜರಿ |
| 2. | ಶ್ರೀ.ಯುವರಾಜ್.ಬಿ | ಸದಸ್ಯ ಕಾರ್ಯದರ್ಶಿ ವಾಡ್ ನಂ: 46 | ಹಾಜರಿ |
| 3. | ಶ್ರೀ.ಡಾ.ಎಸ್.ಶ್ರೀದೇವಿ | ಆರೋಗ್ಯ ವೈಧ್ಯಾಧಿಕಾರಿಗಳು ವಾಡ್ ನಂ: 46 | ಹಾಜರಿ |
| 4. | ಶ್ರೀ.ಹೆಚ್.ಮೂರ್ತಿ | ಕಂದಾಯ ವಸೂಲಿದಾರರು ವಾರ್ಡ್ ನಂ: 46 | ಗೈರು ಹಾಜರಿ |
| 5. | ಶ್ರೀ.ಮಂಜುನಾಥ್.ಕೆ.ಎನ್ | ಸಹಾಯಕ ಕಾರ್ಯಪಾಲಕ ಅಭಿಯಂತರರು, (ಘನತ್ಯಾಜ್ಯ) | ಹಾಜರಿ |
| 6. | ಶ್ರೀ.ಗಣೇಶ್.ಕೆ.ಎನ್ | ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ:46 | ಹಾಜರಿ |
| 7. | ಶ್ರೀ.ರಾಜಣ್ಣ | ಕಂದಾಯ ಅಧಿಕಾರಿ ಜೆ.ಸಿ ನಗರ | ಗೈರು ಹಾಜರಿ |
| 8. | ಶ್ರೀ ಕನಕರಾಜು | ಸಹಾಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ | ಹಾಜರಿ |
| 9. | ಶ್ರೀ ದಸ್ತಗಿರಿ ಬಾಷಾ | ಸಹಾಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ | ಹಾಜರಿ |
| 10. | ಶ್ರೀ.ಜಿ.ಹೆಚ್.ವೀರಣ್ಣ | ಸಂಚಾರಿ ಪೊಲೀಸ್ ವಿಭಾಗ | ಹಾಜರಿ |
| 11. | ಶ್ರೀ.ಕೆ.ಎಸ್.ಪ್ರೇಮಕುಮಾರ್ | ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ | ಹಾಜರಿ |
| 12. | ಶ್ರೀ.ಮೂರ್ತಿ | ವರ್ಕ್ ಇನ್ಸ್‌ಪೆಕ್ಟರ್ ಬಿ.ಡಬ್ಲ್ಯೂ.ಎಸ್.ಎಸ್.ಬಿ | ಹಾಜರಿ |
| 13. | ಶ್ರೀ.ಕೇತನ್ | ಅಸೆಸರ್ | ಹಾಜರಿ |
| 14. | ಶ್ರೀ.ರವೀಂದ್ರ | ಅರಣ್ಯಾಧಿಕಾರಿಗಳು | ಗೈರು ಹಾಜರಿ |
| 15. | ಶ್ರೀ.ಮನೋಹರ್ | ಬೆಸ್ಕಾಂ ಇಲಾಖೆ | ಹಾಜರಿ |
| 16. | ಶ್ರೀ.ಎನ್.ಶಿವಪ್ಪ | ಘನ ತ್ಯಾಜ್ಯ ಸೂಪ್ರವೈಸರ್ | ಗೈರು ಹಾಜರಿ |
| 17. | ಶ್ರೀ.ಲಕ್ಷ್ಮೀಕಾಂತ್ | ಸ್ಥಳಿಯ ನಿವಾಸಿಗಳ ಕ್ಷೇಮಾಭಿವೃಧ್ಧಿ ಸಂಘ | ಹಾಜರಿ |
| 18. | ಶ್ರೀ.ಹರೀಶ್‌ರೆಡ್ಡಿ | ಸ್ಥಳಿಯ ನಿವಾಸಿಗಳ ಕ್ಷೇಮಾಭಿವೃಧ್ಧಿ ಸಂಘ | ಹಾಜರಿ |

ವಾರ್ಡ್ ಕಾರ್ಯದರ್ಶಿಗಳಾದ ಶ್ರೀ ಯುವರಾಜ್.ಬಿ ಸಭೆಗೆ ಹಾಜರಾದ ಅಧ್ಯಕ್ಷರು, ಹಾಗೂ ನೋಡಲ್ ಅಧಿಕಾರಿಗಳಾದ ಶ್ರೀ ಎಸ್.ಜಿ.ರವೀಂದ್ರ, ಭಾ.ಸ.ಸೇ ರವರಿಗೆ ಸ್ವಾಗತ ಕೋರಿ ಸಭೆಯನ್ನು

ಪ್ರಾರಂಭಿಸಲಾಯಿತು. ಹಾಗೂ ಅಧ್ಯಕ್ಷರಿಗೆ ವಾರ್ಡ್ ಸಭೆ ಸಾರ್ವಜನಿಕರ ಕುಂದು [illegible] ವಿಸ್ತಾರವಾಗಿ ಮಾತನಾಡಲು ಕೋರಲಾಯಿತು.

ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು ಸ್ವ ಪರಿಚಯ ಮಾಡಿಕೊಂಡು ವಾರ್ಡ್ ವ್ಯಾಪ್ತಿಯಲ್ಲಿ ಘನ ತ್ಯಾಜ್ಯ ನಿರ್ವಹಣೆ, ಬೀದಿ ದೀಪಗಳ ನಿರ್ವಹಣೆ ಬಗ್ಗೆ ಮತ್ತು ಕೋವಿಡ್-19 ಸಾಂಕ್ರಾಮಿಕ ರೋಗಕ್ಕೆ ಸಂಬಂಧಿಸಿದ ವಿಷಯಗಳು ಮತ್ತು ಇನ್ನಿತರೇ ವಿಷಯಗಳನ್ನು ಚರ್ಚಿಸಲು ಸಾರ್ವಜನಿಕರಿಗೆ ತಿಳಿಯಪಡಿಸಿದರು.

- ಹಿಂದಿನ ಸಭೆಯಲ್ಲಿ ಬಿ.ಡಿ.ಎ ಕಾಂಪ್ಲೇಕ್ಸ್ ಒಳಗಡೆ ಕಾನೂನುಬಾಹಿರ ಕೆಲಸ ನಡೆಯುತ್ತಿದ್ದು, ಸಭೆಯಲ್ಲಿ ಹಾಜರಿದ್ದ ಪೊಲೀಸ್ ಅಧಿಕಾರಿಗಳಿಗೆ ಇದರ ಬಗ್ಗೆ ದೂರು ನೀಡಿದ್ದು, ಪೊಲೀಸ್ ಅಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಂಡಿರುವ ಬಗ್ಗೆ ತಿಳಿಸಿದರು.
- ತರಳುಬಾಳು ರಸ್ತೆ, 9ನೇ ಅಡ್ಡರಸ್ತೆ ಮತ್ತು ವಾರ್ಡ್‌ನ ಇನ್ನಿತರೆ ರಸ್ತೆಗಳಲ್ಲಿ ವೀಲೀಂಗ್ ಹೆಚ್ಚಾಗಿದ್ದು, ಇದರ ಬಗ್ಗೆ ದೂರು ನೀಡಿದ್ದು, ಅದಕ್ಕೆ ಸಂಬಂಧಿಸಿದಂತೆ ಪೊಲೀಸ್ ಅಧಿಕಾರಿಗಳು ಪೊಲೀಸರನ್ನು ಮಫ್ತಿಯಲ್ಲಿ ಬಿಟ್ಟು ವೀಲಿಂಗ್ ಮಾಡುವವರನ್ನು ಹಿಡಿದು ದಂಡ ವಿದಿಸುವುದು ಅಥವಾ ಸೂಕ್ತ ಕ್ರಮ ತೆಗೆದುಕೊಳ್ಳುವುದಾಗಿ ತಿಳಿಸಿದರು.
- ಬಿ.ಡಿ.ಎ ಕಾಂಪ್ಲೆಕ್ಸ್ ಒಳಗಡೆ ಕಸಕ್ಕೆ ಬೆಂಕಿ ಇಡುತ್ತಿದ್ದು ತೊಂದರೆಯುಂಟಾಗುತ್ತಿರುವುದಾಗಿ ವಾರ್ಡ್ ಸಮಿತಿ ಸಭೆಯಲ್ಲಿ ಸಾರ್ವಜನಿಕರು ದೂರು ನೀಡಿದ್ದು, ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಕ್ತ ಕ್ರಮವಹಿಸಲು ತಿಳಿಸಲಾಯಿತು.
- ದೇವೆಗೌಡ ಮುಖ್ಯರಸ್ತೆಯಲ್ಲಿ ಮೀನಿನ ತಳ್ಳುಗಾಡಿಗಳಿಂದ ಸಂಚಾರಕ್ಕೆ ತೊಂದರೆಯುಂಟಾಗುತ್ತಿದ್ದು, ಸಭೆಯಲ್ಲಿ ಹಾಜರಿದ್ದ ಸಂಚಾರಿ ಪೊಲೀಸ್ ಅಧಿಕಾರಿಗಳಿಗೆ ಸೂಕ್ತ ಕ್ರಮವಹಿಸುವಂತೆ ತಿಳಿಸಿದರು.
- ದೇವೆಗೌಡ ಮುಖ್ಯರಸ್ತೆಯಲ್ಲಿ ಮಿಲ್ಕ್ರೀ ವಾಲ್ ಪಕ್ಕದ ಡ್ರೈನೇಜ್ ಬ್ಲಾಕ್ ಆಗಿದ್ದು, ಇದರ ಬಗ್ಗೆ ಸೂಕ್ತ ಕ್ರಮವಹಿಸುವಂತೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳಿಗೆ ತಿಳಿಸಲಾಯಿತು.
- ತಿಮ್ಮಯ್ಯ ಗಾರ್ಡನ್ 7ನೇ ಅಡ್ಡರಸ್ತೆಯಲ್ಲಿ ಮರದ ಕೊಂಬೆಗಳು ರಸ್ತೆಗೆ ಚಾಚಿಕೊಂಡಿರುವ ಮರದ ಕೊಂಬೆಗಳನ್ನು ಕತ್ತರಿಸಲು (ಟ್ರಿಮ್ಮಿಂಗ್) ಸಾರ್ವಜನಿಕರು ಕೋರಿದರು.
- ಚುಂಚಪ್ಪ ಬ್ಲಾಕ್‌ನಲ್ಲಿ ಕೆಲವೊಂದು ಮನೆಗಳಲ್ಲಿ ಕಾವೇರಿ ನೀರನ್ನು ಯಥೇಚ್ಛವಾಗಿ ಪೋಲು ಮಾಡುತ್ತಿದ್ದು, ಅಂತಹ ಮನೆಗಳಿಗೆ ದಂಡ ವಿಧಿಸಲು ಅಥವಾ ಸೂಕ್ತ ಕ್ರಮ ಜರುಗಿಸಲು ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳಿಗೆ ಸೂಚಿಸಲಾಯಿತು.
- ಆರ್.ಟಿ ನಗರ 1ನೇ ಮತ್ತು 2ನೇ ಬ್ಲಾಕ್‌ನಲ್ಲಿ, ಸರಗಳ್ಳತನ , ಮತ್ತು ಇನ್ನಿತರೆ ಸಮಸ್ಯೆಗಳು ಹೆಚ್ಚಾಗಿದ್ದು, ಇದರ ಬಗ್ಗೆ ಕ್ರಮಕೈಗೊಳ್ಳಲು ಸಭೆಯಲ್ಲಿ ಭಾಗಿಯಾಗಿದ್ದ ಪೊಲೀಸ್ ಅಧಿಕಾರಿಗಳಿಗೆ ತಿಳಿಸಲಾಯಿತು.
- ವಾರ್ಡ್ ನಂ.33 ಮತ್ತು 46 ಗಡಿಯಲ್ಲಿ ಹೊಸ ಹೋಟೆಲ್‌ಗಳನ್ನು ನಿರ್ಮಿಸುತ್ತಿದ್ದು, ಅವುಗಳಿಗೆ ಪರವಾನಿಗೆ ಇದೆಯೇ ಎಂಬ ಬಗ್ಗೆ ಸಾರ್ವಜನಿಕರು ಕೋರಿದರು. ಇದರ ಬಗ್ಗೆ ಕ್ರಮಕೈಗೊಳ್ಳಲು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ತಿಳಿಸಲಾಯಿತು.
- ರಸ್ತೆ ಬದಿಯಲ್ಲಿ ನಿಲ್ಲಿಸಿರುವ ಮತ್ತು ಸಂಚಾರಕ್ಕೆ ಅಡ್ಡಿಪಡಿಸುತ್ತಿರುವ ವಾಹನಗಳನ್ನು ಟೋ ಮಾಡಲು, ಸೀಜ್ ಮಾಡಲು, ಅಥವಾ ದಂಡ ವಿಧಿಸಲು ಪೊಲೀಸ್ ಅಧಿಕಾರಿಗಳಿಗೆ ಸೂಚಿಸಲಾಯಿತು.

* 19ನೇ ಕ್ರಾಸ್ ನ ಆರ್.ಟಿ ನಗರ 1ನೇ ಬ್ಲಾಕ್‌ನಲ್ಲಿ ಅನಧಿಕೃತ ಕಟ್ಟಡವನ್ನು ನಿರ್ಮಿಸುತ್ತಿದ್ದು, ಇದರ ಬಗ್ಗೆ ಸಾರ್ವಜನಿಕರು ದೂರು ನೀಡಿದರು.
* ವಾರ್ಡ್ ಸಮಿತಿ ಸಭೆ ಮುಗಿದ ನಂತರ ವಾರ್ಡ್‌ನ ನೋಡಲ್ ಅಧಿಕಾರಿಯಾದ ಶ್ರೀ.ಎಸ್.ಜಿ.ರವೀಂದ್ರ ರವರು ವಾರ್ಡ್ ಪರಿವೀಕ್ಷಣೆ ಮಾಡಿ ಅನಧಿಕೃತ ಕಟ್ಟಡಗಳಿಗೆ ಕೆ.ಎಂ.ಸಿ ಕಾಯ್ದೆ ಪ್ರಕಾರ ಕ್ರಮಕೈಗೊಳ್ಳಲು ಮತ್ತು ಇನ್ನಿತರೇ ಪರವಾನಗಿ ಇಲ್ಲದ ಅಂಗಡಿಗಳಿಗೆ ದಂಡ ವಿಧಿಸಲು ಸೂಚಿಸಿದರು.

ಈ ಮೇಲಿನ ಎಲ್ಲಾ ಅಂಶಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳೊಂದಿಗೆ ಕೂಲಂಕುಶವಾಗಿ ಚರ್ಚಿಸಿದ್ದು ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ ವಂದನೆಗಳೊಂದಿಗೆ ಈ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ: 46, ಜೆ.ಸಿ.ನಗರ

ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ನಂ: 46, ಜೆ.ಸಿ ನಗರ

<u>ಪ್ರತಿಯನ್ನು:-</u>

1. ಮಾನ್ಯ ಜಂಟಿ ಆಯುಕ್ತರು (ಪೂರ್ವ) ಬಿ.ಬಿ.ಎಂ.ಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.
3. ವಾರ್ಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
4. ಕಛೇರಿ ಪ್ರತಿ.